ಸಾರಾ ಅಬೂಬಕ್ಕರ್ ಅವರ ಆಪ್ತ ಗೆಳತಿ ಬಿ.ಎಂ.ರೋಹಿಣಿ. ಸಾರಾ ಅವರು ಗ್ರಾಮೀಣ ಪ್ರದೇಶದ ಮಹಿಳೆಯರ ಜೊತೆಗೆ ಒಡನಾಡುವ ಸಂದರ್ಭದಲ್ಲಿ ಅವರ ಜತೆಗೆ ರೋಹಿಣಿ ಅವರೂ ತೆರಳುತ್ತಿದ್ದರು. ಅವರ ಅಂತರಂಗದ ಸಖಿಯಂತೆ ಇದ್ದವರು. ಶಿಕ್ಷಕಿಯಾಗಿ ಕೆಲಸ ನಿರ್ವಹಿಸಿ, ನಿವೃತ್ತಿಯ ನಂತರ ಸಂಶೋಧನೆ, ಕ್ಷೇತ್ರಾಧ್ಯಯನ, ತುಳಿತಕ್ಕೆ ಒಳಗಾದವರ ಬದುಕು ಬವಣೆಗಳ ಅಧ್ಯಯನ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ವೇಶ್ಯಾಜೀವನದ ಸಮಸ್ಯೆಗಳ ಕುರಿತು ಮಂಗಳೂರಿನ 'ಡೀಡ್' ಸಂಸ್ಥೆಯ ಮೂಲಕ ಅಧ್ಯಯನ ನಡೆಸಿ, ಪುಸ್ತಕ ಬರೆದಿದ್ದಾರೆ. ಅವರ 'ನಾಗದಂದಿಗೆಯೊಳಗಿಂದ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 2019ನೇ ಸಾಲಿನ ಅತ್ಯುತ್ತಮ ಕೃತಿ ಬಹುಮಾನ ಲಭಿಸಿದೆ.

ಉಪನ್ಯಾಸ ಮಾಡುತ್ತಾ, ಚಳವಳಿಗಳಲ್ಲಿ ಭಾಗವಹಿಸುತ್ತಾ ಜನಪರ ಕೆಲಸಗಳಿಗೆ ಬೆಂಬಲ ನೀಡುತ್ತಾ ಸಕ್ರಿಯವಾಗಿದ್ದರು. ಅವರ ಯಾವ ಬರಹವೂ ಹವಾನಿಯಂತ್ರಿತ ಕೊಠಡಿಯಲ್ಲಿ ರೂಪುಗೊಂಡಿದ್ದಲ್ಲ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಯಾವ ಹಳ್ಳಿಮೂಲೆಯ ಮಹಿಳಾ ಮಂಡಳಿಗಳು ವಿನಂತಿಸಿದರೂ ಅಲ್ಲಿ ಹೋಗಿ ನಾಲ್ಕು ಮಾತನಾಡಿ, ಅವರೊಡನೆ ಬೆರೆತು ಸುಖ ದುಃಖ ಮಾತನಾಡಿ ಬರುವುದು ಅವರ ಕ್ರಮ. ಮಾತನಾಡುವ ಯಾವುದೇ ಅವಕಾಶ ಸಿಕ್ಕರೂ ಮೊದಲೇ ಉಪನ್ಯಾಸವನ್ನು ಸಿದ್ಧಪಡಿಸಿ, ಹೇಳಬೇಕಾದ ವಿಷಯಗಳನ್ನು ಮನಸ್ಸು ಮತ್ತು ಹೃದಯ ಮುಟ್ಟುವಂತೆ, ತಟ್ಟುವಂತೆ ಓದುವುದು ಅವರ ರೀತಿ. ಇಂತಹ ಹಲವು ಕಾರ್ಯಕ್ರಮಗಳಲ್ಲಿ ನಾನೂ ಅವರ ಜೊತೆಗಿರುತ್ತಿದ್ದೆ.

ಕರಾವಳಿ ಲೇಖಕಿಯರ, ವಾಚಕಿಯರ ಸಂಘದ ಪ್ರಾರಂಭ ಕಾಲದಿಂದ ತೊಡಗಿ, ಅಧ್ಯಕ್ಷೆಯಾಗಿ ಎರಡು ಅವಧಿಗೆ ಕೆಲಸ ಮಾಡಿದರು. ಸಂಘದ ಕಟ್ಟಡಕ್ಕೆ ಸ್ಥಳ ದೊರಕಿಸುವಲ್ಲಿಂದ ಮೊದಲ್ಗೊಂಡು ಕಟ್ಟಡ ಕಟ್ಟಿಸುವವರೆಗೂ ಅವರು ಮಾಡಿದ ಕೆಲಸವನ್ನು ಮರೆಯಲಸಾಧ್ಯ. ಸಂಘದಲ್ಲಿ ನಮ್ಮೊಳಗೆ ಅಭಿಪ್ರಾಯಭೇದಗಳುಂಟಾದಾಗ, ವ್ಯವಹಾರಕ್ಕೆ ಸಂಬಂಧಿಸಿದ ಸಮಸ್ಯೆಗಳು ಉಂಟಾದಾಗ ಅವರೊಬ್ಬ ವಕೀಲರ ಮಗಳು ಎಂಬುದನ್ನು ಸಾಬೀತು ಪಡಿಸುವ, ಅವರ ಚಾಕಚಕ್ಯತೆಗೆ ನಾವು ಶಿರ ಬಾಗಿದ್ದೇವೆ. ಸಮಾಜದ ರೋಗಗಳಾದ ಮೌಢ್ಯ ಮತ್ತು ಕೆಟ್ಟ ಸಂಪ್ರದಾಯಗಳನ್ನು ಖಂಡಿಸಿ, ಚಿಕಿತ್ಸೆ ನೀಡುವ ವೈದ್ಯೆಯಂತೆ ಅವರು ನನಗೆ ಕಾಣುತ್ತಿದ್ದರು. ಮಹಿಳೆಯ ಮೇಲಿನ ದೌರ್ಜನ್ಯ, ಹಿಂಸೆ, ಶೋಷಣೆಗಳನ್ನು ವಿರೋಧಿಸಿ ನ್ಯಾಯ ಕೊಡಿಸುವ ನ್ಯಾಯಾಧೀಶೆಯಾಗಿಯೂ ವ್ಯವಹರಿಸುತ್ತಿದ್ದುದನ್ನು ನಾನು ಗಮನಿಸಿದ್ದೇನೆ. ಸಾಮಾಜಿಕ ಜಾಗೃತಿ ಮತ್ತು ಪ್ರಜ್ಞಾವಂತ ಸಮಾಜ ನಿರ್ಮಾಣ ಮಾಡುವ ಮತ್ತು ಸೌಹಾರ್ದ ಭಾವದಿಂದ ಎಲ್ಲರನ್ನೂ ಅಂತರಂಗಕ್ಕೆ ಎಳೆದುಕೊಳ್ಳುವ ಗುಣವಿತ್ತು. ಮನುಷ್ಯ ಪ್ರೀತಿಯನ್ನು ಧಾರಾಳವಾಗಿ ಹಂಚಿದ ಸಾರಾ ಒಮ್ಮೆ ಮಂಗಳೂರು ಮಹಾನಗರ ಪಾಲಿಕೆಯ ಕಾರ್ಪೊರೇಟರ್ ಸ್ಥಾನಕ್ಕೆ ಜಾತ್ಯತೀತ ಜನತಾದಳ ಪಕ್ಷದಿಂದ ಸ್ಪರ್ಧಿಸಿ ಸೋತಿದ್ದರು. ಸೋಲು ಖಚಿತವೆಂದು ಗೊತ್ತಿದ್ದರೂ, ಆ ಕಣಕ್ಕಿಳಿದ ಅವರ ಧೈರ್ಯವನ್ನು ಮೆಚ್ಚದಿರಲು ಸಾಧ್ಯವಿಲ್ಲ. ಆನಂತರ, ಅನೇಕ ಮುಸ್ಲಿಂ ಮಹಿಳೆಯರು ಸ್ಥಳೀಯ ಸಂಸ್ಥೆಗಳಿಗೆ ಸ್ಪರ್ಧಿಸಿ ಗೆದ್ದ ಚರಿತ್ರೆಗೆ ಈ ಘಟನೆ ನಾಂದಿಯಾಯಿತು. ಆ ಮಟ್ಟಿಗೆ ಅಂದು ಸಾರಾ ಚುನಾವಣಾ ಕಣಕ್ಕಿಳಿದು ತಾತ್ವಿಕವಾಗಿ ಗೆದ್ದಿದ್ದಾರೆ ಎಂದೇ ಅರ್ಥ ಅಲ್ಲವೆ.

ಪ್ರತಿಭಾವಂತರಿಗೆ ಕಷ್ಟವನ್ನು ಎದುರಿಸುವ ಶಕ್ತಿ ಸಹಜವಾಗಿರುತ್ತದೆ. ಆದರೆ, ಪ್ರತಿಭೆ ಪ್ರಕಟಗೊಳ್ಳಲು ನೂರರಲ್ಲಿ ಒಂದು ಅಂಶ ಸ್ಫೂರ್ತಿ ಕಾರಣವಾದರೆ ಶೇ 99 ಅಂಶ ಅವರ ಪರಿಶ್ರಮವೇ ಕಾರಣ. ಸಂಸಾರದ ತಾಪತ್ರಯಗಳು, ಸಮುದಾಯದಲ್ಲಿ ಮತ್ತು ಕುಟುಂಬದಲ್ಲಿ ಸಾಹಿತ್ಯದ ಬಗ್ಗೆ ಇರುವ ತಿರಸ್ಕಾರ, ಪುರೋಹಿತಶಾಹಿಗಳು ಸಮಾಜದಲ್ಲಿ ಧರ್ಮದ ಅಮಲನ್ನು ಬಿತ್ತುವ ಕಾಯಕದಲ್ಲಿ ತಲ್ಲೀನರಾಗಿರುತ್ತಿದ್ದುದು – ಈ ಎಲ್ಲಾ ದುಗುಡ ದುಮ್ಮಾನ, ಮಾನಸಿಕ ಒತ್ತಡಗಳ ನಡುವೆಯೂ ಸಾರಾ ಅವರು ಸಾಲು ಸಾಲಾಗಿ ಕಥೆ, ಕಾದಂಬರಿ,